ಕರ್ನಾಟಕ ಸರ್ಕಾರ
(ಸಹಕಾರ ಇಲಾಖೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿಆಸ್ಕರ್ ರಸ್ತೆ, ಬೆಂಗಳೂರು-52

ಸಂಖ್ಯೆ:ಯುಬಿಸಿ-1/231/ಯುಎಂಸಿ/2017-18 ದಿನಾಂಕ:23-09-2017

:: ಸುತ್ತೋಲೆ -263

**ವಿಷಯ:-** ರಾಜ್ಯದಲ್ಲಿರುವ ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳು ಬ್ಯಾಂಕ್ ಪದ ಬಳಸುತ್ತಿರುವ ಬಗ್ಗೆ.

**ಉಲ್ಲೇಖ;-** ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ನಡೆದ ಸಭಾ ನಡವಳಿಗಳು.

=====

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ನೊಂದಣಿಯಾದ ಸಹಕಾರ ಸಂಘಗಳು/ಸಹಕಾರಿಗಳು ಆಯಾಯ ಅಧಿನಿಯಮದ ಚೌಕ್ಕಟ್ಟಿನಲ್ಲಿ ಕಾರ್ಯನಿರ್ವಹಿಸುವುದು ಅಪೇಕ್ಷಣೀಯ.

ಬ್ಯಾಂಕಿಂಗ್ ರೆಗ್ಯೂಲೇಷನ್ ಅಧಿನಿಯಮ 1949 ರ ಅಡಿಯಲ್ಲಿ ಬ್ಯಾಂಕಿಂಗ್ ಲೈಸನ್ಸ್ ಪಡೆಯದ ಯಾವುದೇ ಸಂಸ್ಥೆಯು "ಬ್ಯಾಂಕ್" ಎಂದು ನಮೂದಿಸಿ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವುದು ಬಿ.ಆರ್.ಅಧಿನಿಯಮದ ಸ್ಪಷ್ಟ ಉಲ್ಲಂಘನೆಯಾಗುತ್ತದೆ. ಅಂತಹ ಸಂಸ್ಥೆಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನಿನ ಕ್ರಮ ಜರುಗಿಸಲು ಅವಕಾಶವಿದೆ.

ರಾಜ್ಯದಲ್ಲಿರುವ ಕೆಲವು ಸಹಕಾರ ಸಂಘಗಳು/ಸಹಕಾರಿಗಳು ಬ್ಯಾಂಕಿಂಗ್ ಲೈಸನ್ಸ್ ಪಡೆಯದಿದ್ದರೂ ಸಹಕಾರ ಬ್ಯಾಂಕ್ ಎಂಬ ಪದ ಬಳಸಿ ವ್ಯವಹರಿಸುತ್ತಿರುವುದು ಈ ಕಛೇರಿ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಗಮನಕ್ಕೆ ಬಂದಿರುತ್ತದೆ.

ಈ ವಿಷಯವು ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸರ್ಕಾರದ ಉನ್ನತ ಮಟ್ಟದ ಸಭೆಗಳಲ್ಲಿ ಪದೇ ಪದೇ ಚರ್ಚೆಗೆ ಬರುತ್ತಿದೆ.

ಇನ್ನು ಮುಂದೆ, ಬ್ಯಾಂಕಿಂಗ್ ರೆಗ್ಯೂಲೇಷನ್ ಅಧಿನಿಯಮ 1949 ರ ಅಡಿಯಲ್ಲಿ ಬ್ಯಾಂಕಿಂಗ್ ಲೈಸನ್ಸ್ ಪಡೆಯದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರಡಿ ನೊಂದಣಿಯಾದ ಸಹಕಾರ ಸಂಘಗಳು/ಸಹಕಾರಿಗಳು

“ಬ್ಯಾಂಕ್” ಎಂದು ನಮೂದಿಸಿ ವ್ಯವಹರಿಸತಕ್ಕದ್ದಲ್ಲ, ಸಾರ್ವಜನಿಕರಲ್ಲಿ ಗೊಂದಲ ಮೂಡಿಸತಕ್ಕದ್ದಲ್ಲವೆಂದು ಈ ಮೂಲಕ ಸೂಚಿಸಿದೆ.

ಒಂದು ವೇಳೆ ಅದೇ ಪ್ರವೃತ್ತಿ ಮುಂದುವರಿಸಿ ಬ್ಯಾಂಕ್ ಎಂಬ ಪದ ಮುಂದುವರಿಸಿದಲ್ಲಿ ಅಂತಹ ಸಹಕಾರ ಸಂಘದ/ಸಹಕಾರಿ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ ಕಟ್ಟುನಿಟ್ಟಿನ ನಿರ್ದಾಕ್ಷಣ್ಯ ಕ್ರಮ ಜರುಗಿಸಲಾಗುವುದು.

ಇಲಾಖೆಯ ಕ್ಷೇತ್ರಿಯ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು “ಬ್ಯಾಂಕ್” ಪದ ಬಳಸುತ್ತಿದ್ದಲ್ಲಿ ವರದಿ ಸಲ್ಲಿಸಲು ಸೂಚಿಸಿದೆ.

(ಎಂ.ಕೆ.ಅಯ್ಯಪ್ಪ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ,

1) ರಾಜ್ಯದಲ್ಲಿನ ಎಲ್ಲಾ ಸಹಕಾರ ಸಂಘಗಳಿಗೆ ಆಯಾ ಕಾರ್ಯವ್ಯಾಪ್ತಿಯ ನಿಬಂಧಕರ ಮೂಲಕ.
2) ಕೇಂದ್ರ ಕಛೇರಿಯ ಎಲ್ಲಾ ವಿಭಾಗೀಯ ಮುಖ್ಯಸ್ಥರು.
3) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು. ಇವರಿಗೆ ಕಳುಹಿಸುತ್ತಾ ಅವರ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳಿಗೆ ಈ ಸುತ್ತೋಲೆಯನ್ನು ಕಳುಹಿಸಿ ಸುತ್ತೋಲೆ ಸೂಚನೆ ಪಾಲಿಸಲು ಕ್ರಮ ಕೈಗೊಳ್ಳುವುದು.
4) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು, ಇವರಿಗೆ ಕಳುಹಿಸುತ್ತಾ ಅವರ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳಿಗೆ ಈ ಸುತ್ತೋಲೆಯನ್ನು ಕಳುಹಿಸಿ ಸುತ್ತೋಲೆ ಸೂಚನೆ ಪಾಲಿಸಲು ಕ್ರಮ ಕೈಗೊಳ್ಳುವುದು.
5) ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಇವರಿಗೆ ಕಳುಹಿಸುತ್ತಾ ಅವರ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳಿಗೆ ಈ ಸುತ್ತೋಲೆಯನ್ನು ಕಳುಹಿಸಿ ಸುತ್ತೋಲೆ ಸೂಚನೆ ಪಾಲಿಸಲು ಕ್ರಮ ಕೈಗೊಳ್ಳುವುದು.
6) ಎಲ್ಲಾ ತಾಲ್ಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ, ಇವರಿಗೆ ಕಳುಹಿಸುತ್ತಾ ಅವರ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳಿಗೆ ಈ ಸುತ್ತೋಲೆಯನ್ನು ಕಳುಹಿಸಿ ಸುತ್ತೋಲೆ ಸೂಚನೆ ಪಾಲಿಸಲು ಕ್ರಮ ಕೈಗೊಳ್ಳುವುದು.
7) ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು, ಇವರಿಗೆ ಕಳುಹಿಸುತ್ತಾ ಲೆಕ್ಕ ಪರಿಶೋಧನೆ ವೇಳೆಯಲ್ಲಿ ಈ ವಿಷಯದ ಬಗ್ಗೆ ಪರಿಶೀಲಿಸಿ ಲೆಕ್ಕ ಪರಿಶೋಧನೆ ವರದಿಯಲ್ಲಿ ನಮೂದಿಸಿ ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.
8) ಪ್ರಧಾನ ವ್ಯವಸ್ಥಾಪಕರು, ಪಟ್ಟಣ ಬ್ಯಾಂಕುಗಳ ವಿಭಾಗ, ಭಾರತೀಯ ರಿಸರ್ವ್ ಬ್ಯಾಂಕ್, ನೃಪತುಂಗ ರಸ್ತೆ, ಬೆಂಗಳೂರು.
9) ಸಹಕಾರ ಇಲಾಖಾ ಜಾಲತಾಣ – ಸಹಕಾರ ಸಿಂಧು.